**ಸಿ.ಎಂ.ಸಿ ನಂಬರ್ : 01/2021**
**ಪಿ .ಡಬ್ಲ್ಯೂ :** 1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕ :27.02.2024

**ಮುಂದುವರೆದ ಪಾಟೀ ಸವಾಲು : ಎದುರುದಾರರ ಪರವಾಗಿ ಶ್ರೀ ಹೆಚ್.ಪಿ.ಎಂ ವಕೀಲರಿಂದ ಃ**

ಡಿ.ಸಿ.ಪ್ರಭಾಕರ್ ನನ್ನ ಅಣ್ಣ. ನಾನು ಮತ್ತು ನನ್ನ ಅಣ್ಣ ಒಂದೇ ಮನೆಯಲ್ಲಿ ವಾಸವಿದ್ದೇವೆ ಅಂದರೆ ಸರಿ. ನಾನು ಮತ್ತು ನನ್ನ ಅಣ್ಣ ಒಂದೇ ವ್ಯವಹಾರ ಮಾಡುತ್ತೇವೆ ಅಂದರೆ ಸರಿಯಲ್ಲ. ಎದುರುದಾರರ ಮೇಲೆ ನನ್ನ ಅಣ್ಣ ಚೆಕ್ಕು ಅಮಾನ್ಯ ಪ್ರಕರಣ ದಾಖಲಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣವನ್ನು ಶಿವಮೂರ್ತಿ ವಕೀಲರು ನಡೆಸಿದ್ದರು ಅಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ರಾಜಿಯಾಗಿ ಕೊಡಬೇಕಾದ ಎಲ್ಲಾ ಹಣ ಕೊಟ್ಟು ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಹಣದ ಭದ್ರತೆಗಾಗಿ ಓ.ಎಸ್.ನಂಬರ್ 47/2017 ರ ಕರಾರನ್ನು ಬರೆದುಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಸದರಿ ಕರಾರಿನಂತೆ ಯಾವುದೇ ವ್ಯವಹಾರ ನಡೆದಿಲ್ಲ ಅಂದರೆ ಸರಿಯಲ್ಲ. ಓ.ಎಸ್.ನಂಬರ್ 47/2017 ರ ದಾವೆಯನ್ನು ಶಿವಮೂರ್ತಿ ವಕೀಲರೆ ನಡೆಸಿದ್ದರು ಅಂದರೆ ಸರಿ. ಸದರಿ ದಾವೆಯನ್ನು ನಾನು ಮೂಲತಃ ಕುಶಾಲನಗರ ನ್ಯಾಯಾಲಯದಲ್ಲಿ ದಾಖಲಿಸಿದ್ದು ಅಧಿಕಾರ ವ್ಯಾಪ್ತಿಯ ಆಧಾರದಲ್ಲಿ ಸದರಿ ವಾದ ಪತ್ರವನ್ನು ಹಿಂತಿರುಗಿಸಿದ್ದು ಈ ನ್ಯಾಯಾಲಯದಲ್ಲಿ ಓ.ಎಸ್.ನಂಬರ್ 47/2017 ರಂತೆ ದಾವೆಯನ್ನು ಸಲ್ಲಿಸಿದ್ದೇನೆ. ಸದರಿ

ದಾವೆಯನ್ನು ಈ ನ್ಯಾಯಾಲಯದಲ್ಲಿ ಶಿವಮೂರ್ತಿ ವಕೀಲರು ಸಲಹೆ ನೀಡಿದ್ದರು. ಆನಂತರ ನಾನು ಚಂದ್ರಶೇಖರ್ ವಕೀಲರ ಮೂಲಕ ಈ ಪ್ರಕರಣವನ್ನು ನಡೆಸುತ್ತಿದ್ದೇನೆ. ಓ.ಎಸ್.ನಂಬರ್ 47/2017 ರ ದಾವೆ ದಿಃ 15.07.2019 ರಂದು ವಜಾಗೊಂಡಿದೆ ಅಂದರೆ ನನಗೆ ನೆನಪಿಲ್ಲ. ಎದುರುದಾರರಿಗೆ ತೊಂದರೆ ಕೊಡಲು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ**

ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸರಿ ಇದೆ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸೋಮವಾರಪೇಟೆ.